ನಮ್ಮ ಎಳವೆಯ ದಿನಗಳಿಗೆ ಅಮ್ಮನ ತತ್ಪರ ಆರೈಕೆಯೊಂದಿಗೆ ಇತರ ಅದೆಷ್ಟು ಕೈಗಳ ನೆರವಿತ್ತು – ನೆನೆಯುವುದರಲ್ಲೇ ನಲ್ಮೆಯ ನವಿರು ಮೈತುಂಬ ಕವಿದಂತೆ. ಬೆಳಗುಮುಂಚೆ ಬಂದು ಸ್ನಾನಮಾಡಿಸಿ ತಲೆಬಾಚಿ ಜಡೆಹೆಣೆಯುವ ಕಲ್ಯಾಣಿ. ಹಿಡಿದ ಕೂದಲರಾಶಿಗೆ ಒರಟು ಕೈಗಳೊಳಗಿಂದ ಹರಿದು ಹಚ್ಚಿ ನಿಲ್ಲುವ ಮೃದು ಮಮತೆಯ ಭಾವ. ತಾನು ಕಟ್ಟಿತಂದ ಹೂಮಾಲೆಯನ್ನು ಅದರ ಹೆಣಿಗೆಯ ನಯ ಮುರಿಯದಂತೆ ಎರಡೂ ಜಡೆಗಳಿಗೆ ಸೇತುವೆಯಾಗಿ ಮುಡಿಸುತ್ತಿದ್ದಳು. ಕಾಲ ಕಾಲಕ್ಕೆ ಬದಲಾಗುವ ಹೂಗಳ ಜಾತಿ, ಬಣ್ಣ, ಗಾತ್ರ, ಗಂಧಗಳು ಪ್ರತಿದಿನವೂ ಒಂದು ಗಮನೀಯ ಕೌತುಕವನ್ನು ಕಾದಿರುತ್ತಿದ್ದವು. ಮಕ್ಕಳಿಗಾಗಿ ಕಲ್ಯಾಣಿಯ ಕೈಯಲ್ಲಿಡುವ ತಿಂಡಿಯನ್ನು ಅಮ್ಮ ಮೊದಲೇ ಕಟ್ಟಿಡುತ್ತಿದ್ದಳು. ಕೈಹಿಡಿದು ಶಾಲೆಗೆ ಕಾಳಜಿಯಿಂದ ಕರೆದೊಯ್ಯುವ ಎಲಿಸಾ ನನ್ನ–ಅಣ್ಣನ ನಡುವೆ ಕೊಂಡಿಯಾಗಿ ಉಳಿದಿದ್ದಳು. ಸ್ನೇಹಭಾವವೇ ಸ್ತ್ರೀರೂಪ ಧರಿಸಿ ಬಂದಂತಿದ್ದ ಆಕೆ ನಮ್ಮ ಬಾಲ್ಯಕ್ಕೇ ಬಳಿದ ಮೆರುಗಾಗಿದ್ದಳು. ಹೊಟ್ಟೆ ನೋವೆಂದು ಅತ್ತು ಮಲಗಿದರೆ ಒಡನೆಯೆ ಓಡಿಬಂದು ಅದೇನೋ "ಮುಷ್ಟಿ'' ಮಾಡುತ್ತ ಕೈಯಾಡಿಸಿ ನೋವು ಕಳೆದೇ ಬಿಡುತ್ತಿದ್ದ ಉಮ್ಮಸಲಿಮ. ಹಟಹಿಡಿದು ಆಕೆಯ ಹಿಂದೆಯೇ ಬಂದಿರುತ್ತಿದ್ದ ಮಗಳು ಹಮೀದಾಳಿಗೆ ನನ್ನೊಡನಾಟದ ಅದಮ್ಯ ಹಂಬಲ. ಯಕ್ಷಗಾನ, ನಾಟಕ, ಕೋಲ, ಉತ್ಸವಗಳ ಗೀಳಿನ ಕಾರ್ಚಿ ಎಂಬ ಮುದುಕಿ, ತನ್ನ ಆಸ್ಥೆಗೆ ನಮ್ಮದಾದ ಒಂದಿಷ್ಟು ಹಣವನ್ನು ಹೊಂದಿಸಿಕೊಂಡು ಕಾಳಜಿಯಿಂದ ನಮ್ಮನ್ನು ಕರೆದೊಯ್ಯುತ್ತಿದ್ದಳು. ತಡರಾತ್ರಿಗೆ ನಿದ್ದೆಗೆ ಜಾರಿದೊಡನೆ ಮಡಿಲು ನೀಡಿ ಮಲಗಿಸಿಕೊಂಡು ಮರುಬೆಳಗಿಗೆ ಮನೆಗೆ ತಂದೊಪ್ಪಿಸುತ್ತಿದ್ದಾಕೆ. ತನ್ನ ವಯಸ್ಸೆಷ್ಟು ಎಂದು ಆಕೆಗೇ ಗೊತ್ತಿರಲಿಲ್ಲ. ರಾತ್ರಿ ತೋಟಕಾವಲಿಗೆ ಬರುವ ಕರ್ನಾಲನನ್ನು ಸಾಯಂಕಾಲದಿಂದಲೆ ಕಾಯುತ್ತ ಕೂತಿರುತ್ತಿದ್ದೆವು. ತೃಪ್ತಿಯಾಗಿ ಊಟ ಮುಗಿಸಿ ಅಪ್ಪನೊಡನೆ ವೀಳ್ಯಹಾಕುತ್ತ ಕೂತಿರುವಾಗ ಆತ ನಮಗಾಗಿ ಹೇಳ್ತಾಯಿದ್ದ ರಾಶಿ ಕಥೆಗಳ ರೋಚಕತೆಗೆ ಅಪಾರ ಸೆಳೆತವಿರುತ್ತಿತ್ತು. ಅದರಲ್ಲಿ ಧಾರಾಳ ಹಾಸ್ಯದ ಹೊನಲಿತ್ತು. ಭೂತ–ಬಂಗಲೆಗಳ, ಪ್ರೇತ–ಪರಿವಾರಗಳ ವೃತ್ತಾಂತಗಳಲ್ಲಿ ಅಣ್ಣ ಧೈರ್ಯವಾಗಿ ಕೂತಿರುತ್ತಿದ್ದ. ಒಳಗೊಳಗೇ ಹೆದರಿದರೂ ನಾನೂ ತೋರದಿರುತ್ತಿದ್ದೆ. ಕತ್ತಲೆಗೆ ಬರ್ತಾಯಿದ್ದಾಗಲೇ, "ಪುಟ್ಟಣ್ಣಾ... ಪುಟ್ಟಕ್ಕಾ...'' ಎಂದು ಗೇಟಿನಿಂದಲೇ ಕೇಳಿಬರುವ ಕರೆಗೆ ನಮ್ಮ ಪ್ರಾಣಶಕ್ತಿಯೆಲ್ಲ ಒಟ್ಟಾಗಿ ಓಗೊಡುತ್ತಿತ್ತು. ಜಾತಿಯ ಗೋಡೆ ಅಲ್ಲಿರಲಿಲ್ಲ. ಮತವನ್ನು ಮೀರಿದ ಮಾನವತೆ ಮಂದಿಯ ನಡುವೆ ಕ್ರಮಾಗತವಾಗಿತ್ತು. ಪ್ರೀತಿಯ, ವಿಶ್ವಾಸದ, ಸ್ನೇಹ ಸೌಹಾರ್ದದ ಲಿಖಿತ ದಾಖಲೆ ಪತ್ರಗಳಂತಿದ್ದ ಈ ಮನುಷ್ಯರು ಇಂದೇಕೆ ನಮ್ಮ ನಡುವೆ ಕಂಡುಬರ್ತಾ ಇಲ್ಲ?

ಅಡಿಕೆ ವ್ಯಾಪಾರಕ್ಕೆ ಬರ್ತಾಯಿದ್ದ ಸೇಕಾಲಿ ನಮಗೆ ಪರಮಾಪ್ತನಾಗಿದ್ದ. ತೋಟದ ತೆಂಗಿನಕಾಯಿ, ಬಾಳೆಕಾಯಿ, ತರಕಾರಿ, ಕರಿಮೆಣಸು, ಗೇರುಬೀಜಗಳನ್ನೆಲ್ಲ ಆತನೆ ಕೊಂಡುಕೊಂಡು ಹಣದ ವಿಚಾರದಲ್ಲಿ ಪಾರದರ್ಶಕ ಪ್ರಾಮಾಣಿಕತೆಯಿರುತ್ತಿತ್ತು. ನಮ್ಮ ನಡುವೆ ಏಕವಚನವೇ ಸಹಜವಾಗಿ ಬಳಕೆಯಲ್ಲಿತ್ತು. ಅರವತ್ತರ ಅಂಚಿನಲ್ಲಿ ಪೂರಾ ಬಿಳಿಯಾದ ತಲೆಗೂದಲು, ಬಿಳಿ ಅಂಗಿ – ಮುಂಡು ಮತ್ತು ಸದಾ ಮಂದಹಾಸದ ಶುಭ್ರದಂತಪಂಕ್ತಿಯ ಸುಕ್ಕು ಮುಖದಲ್ಲಿ ಸ್ವಕೀಯ ಸ್ನೇಹ ಸ್ಪಷ್ಟವಾಗಿರುತ್ತಿತ್ತು. ದಿನಬಳಕೆಯ ವಸ್ತುಗಳಲ್ಲಿ ಬಹಳಷ್ಟನ್ನು ಅಮ್ಮ ಈತನಲ್ಲೇ ತರಿಸಿಕೊಳ್ಳುತ್ತಿದ್ದಳು. ಚಿಲ್ಲರೆ ಕಾಸಿನಲ್ಲಿ ಚೌಕಾಸಿ ಮಾಡುತ್ತಿದ್ದಾಕೆ ಊಟತಿಂಡಿಯಲ್ಲಿ ತೋರುವ ಧಾರಾಳ ಅಸದೃಶವಾಗಿತ್ತು. ಯಾವ ಹೊತ್ತಿಗೆ ಬಂದರೂ ಮನೆಯಲ್ಲಿ ಹಸಿವೆ ನೀರಡಿಕೆಗಳ ನಿರ್ವಹಣೆ ನಿರಾಳವಾಗಿ ನಡೆದುಹೋಗುತ್ತಿತ್ತು. ಅಮ್ಮ ಅಗಲಿಹೋದ ಮೇಲೆ ಈ ಸೇಕಾಲಿ ನಮ್ಮಂತೆಯೇ ತೀರ ತಬ್ಬಲಿಯಾಗಿಹೋಗಿದ್ದ. ಮನೆಗೆ ಆಗಾಗ ಬಂದರೂ ಮಾತೇ ಇಲ್ಲದೆ ಕೂತಿರುತ್ತಿದ್ದ. ಮೂಕಸಂಕಟವೊಂದು ನಮ್ಮನ್ನು ಒಟ್ಟುಮಾಡಿ ಒತ್ತುತ್ತಿತ್ತು. ಕುಡಿಯುವ ನೀರಿಗಾಗಿ ಮಣ್ಣಿನ